


### ಎಡದಿಂದ ಬಲಕ್ಕೆ

1. ಆತನ ಸಂಗಡ ಓಡಾಡಿದ ವಿಷಯ ಪ್ರಸ್ತುತ ಸಂಗತಿಗೆ ಸಂಬಂಧಿಸಿದ್ದೇ ಅಲ್ಲ 4
3. ವಿಷಯವನ್ನೇ ತಿಳಿಯದೆ ಜಗಳಕ್ಕೆ ಇಳಿದು ಎಲ್ಲವೂ ಹಾಳಾಯಿತು 3
4. ಆತನ ಬಂಧು ಬಾಂಧವರ ಮನೆಗಳೆಲ್ಲ ಖಾಲಿ ಖಾಲಿ 3
6. ನೋಡುಗರನ್ನೆಲ್ಲ ನಲಿಸಿದ್ದು ಪಂದ್ಯದ ಮಧ್ಯದ ಸಮಯ 4
7. ನೆಪಕ್ಕೆ ಭಾರೀ ಬಿಲ್ಲು ಹಿಡಿದಿರುವವನಿಗೆ ಕುಡಿಯಲು ಸಿಹಿ ಪೇಯ 3
9. ತಡವಾಗಿ ಬಂದವರನ್ನೆಲ್ಲ ಕೂರಿಸಿ ಬಾರಿಸಿದ್ದು 3
11. ತ್ಯಾಜ್ಯಗಳನ್ನೆಲ್ಲ ಸಂಗ್ರಹಿಸುವ ಕೆಲಸವನ್ನು ತೊರೆದುಬಿಡು 3
13. ಸುಮ್ಮನಿರು ಎಂಬಂತಿತ್ತು ಸ್ವಲ್ಪ ಹೆಚ್ಚು ಕಡಿಮೆ, ಅದೂ ಹಿಂದುಮುಂದು 3
15. ಮಂಜು ಬೀಳುತ್ತಿದೆ ಎಂದೊಡನೆ ಶುರುವಾಯ್ತು 'ಶೀತದ ಭಯ' 4
17. ಇಡೀ ಬೇಕರಿಯನ್ನೇ ಮಾಡಿದ್ದಾಯ್ತು ಮಾರಾಟ 3
18. ಪೂರ್ಣ ಮುಗಿಸು ಎಂದು ಹೇಳಿದ್ದರೂ ಸ್ವಲ್ಪ ಉಳಿಸು 3
19. ತಪ್ಪಾಗಿರುವುದು ಹೌದು ತಾನೇ? ಹಾಗಾದರೆ ನೀನೀಗ ಸುಮ್ಮನಿರು 4

### ಮೇಲಿನಿಂದ ಕೆಳಕ್ಕೆ

1. ಅಶ್ವಿನಿಯ ಅಭಿಮಾನಿಗಳಿಗೆಲ್ಲ ಅಂದು ಸಿಕ್ಕಿತ್ತು ಊಟ 3
2. ತುಂಬ ಬಲವಂತ ಮಾಡಿದ್ದಕ್ಕೆ ಆತ ನುಡಿಸಿದ್ದು ಈ ಲಯ ವಾದ್ಯ 3
3. ಗೋವಿಂದನ ಕೃಪೆ ಗಳಿಸಲು ಸೂಕ್ತ ಕ್ರಮ ಏನು ಗೊತ್ತೇ? 3
5. ಗುದ್ದಾಡಿ ಬಂದಿದ್ದಾಯಿತು; ಈಗೇಕೆ ದುಃಖ? 3
7. ಪರಾತ್ಪರನದೇ ಆ ಊರಲ್ಲಿ ಸಂಪೂರ್ಣ ಆಧಿಪತ್ಯ, ಆಡಳಿತ 4
8. ಕಬ್ಬನ್ನೆಲ್ಲ ಕೆಳಗಿಳಿಸೆಂದಿದ್ದನ್ನು ತಿಂದುಹಾಕು ಎಂದು ಅರ್ಥ ಮಾಡಿಕೊಂಡ 4
9. ಮುಹೂರ್ತ ಮೀರುವುದರೊಳಗೆ ಮಾಡಹೋಗಿ ಎಲ್ಲವೂ ಚೆಲ್ಲಾಪಿಲ್ಲಿ 4
10. ನಗಿಸುತ್ತೇನೆಂದು ಹೋಗಿ ಎಲ್ಲರೂ ಹೆದರಿ ಕಂಪಿಸುವಂತೆ ಮಾಡು 4
12. ಜೇಬಿನಲ್ಲಿ ತುಂಬಿಕೊಂಡಿದ್ದಾನೆ ನೋಡಿ, ಪ್ರಸಿದ್ಧ ತಿಂಡಿ 3
14. ತಿಂದು ಮುಗಿಸುವ ಮೊದಲು ಹಣ್ಣಾಗುವಂತೆ ಮಾಡು 3
15. ಚಿತ್ತೂರಿನ ಜಾತ್ರೆಯ ಇತಿಹಾಸ ಗೊತ್ತೇ? 3
16. ಮಿತಿ ಮೀರುವಷ್ಟಾಗಿದೆ ಆತನ ಸೊಕ್ಕು 3

---

### 06–03–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಭಿದಾನ 3. ರಗನಾ (ನಾಗರ ಹಿಂದುಮುಂದು) 4. ಮಹಿಮೆ 6. ದಿಟ್ಟತನ 7. ಅಂತಕ 9. ಬಾಲಿಕೆ 11. ಸುಶೀಲ 13. ನನಸು 15. ಅನುಗ್ರಹ 17. ಲಕುಮಿ 18. ರಮಾಕು (=ಕುಮಾರ ಹಿಂದುಮುಂದು) 19. ತರುವಾಯ

**ಮೇಲಿನಿಂದ ಕೆಳಕ್ಕೆ**

1. ಅನಾದಿ 2. ನಮನ 3. ರಹಿತ 5. ಮೆಲ್ಲುಲಿ 7. ಅಂಜಿಸು 8. ಕಪಿಲ 9. ಬಾಗಿನ 10. ಕೆಡಿಸು 12. ಶೀತಲ 14. ನಸುಕು 15. ಅಮಿತ 16. ಹರಯ

ಪ್ರಶ್ನಾಂಕಣ

## ಹಿಮನದಿಗಳ ಹಿಂಜರಿತ: ಏಕಿಷ್ಟು ಆತಂಕ?

ಪೃಥ್ವಿಯ ಅತ್ಯುನ್ನತ ಪರ್ವತ ಪ್ರದೇಶಗಳಲ್ಲಿ ಹಾಗೂ ಅಂಟಾರ್ಕ್ಟಿಕಾ, ಗ್ರೀನ್‌ಲ್ಯಾಂಡ್‌ಗಳಂತಹ ಶಾಶ್ವತ ಹಿಮಾಚ್ಛಾದಿತ ಪ್ರದೇಶಗಳಲ್ಲಿ ಹತ್ತಾರು ಸಾವಿರ ವರ್ಷಗಳಿಂದ ಶೇಖರವಾಗಿರುವ ಹಿಮ ಸಾವಿರಾರು ಚದರ ಕಿ.ಮೀ. ವೈಶಾಲ್ಯಕ್ಕೆ ಹರಡಿದೆ; ಬಂಡೆಹಾಸುಗಳಂತೆ ಗಟ್ಟಿಯಾಗಿದೆ. ಹಾಗೆ ಶಾಶ್ವತ ಹಿಮ ಮುಸುಕಿರುವ ನೆಲೆಗಳಲ್ಲಿ ಬೃಹತ್ ಹಿಮರಾಶಿಗಳು ಕರಗುತ್ತ ಕರಗುತ್ತ ನಿಧಾನವಾಗಿ ಜರಗುತ್ತವೆ. ಅವೇ ಹಿಮನದಿಗಳು (ಚಿತ್ರಗಳಲ್ಲಿ ನೋಡಿ)

ಧರೆಯ ಪರ್ವತ ಪ್ರದೇಶಗಳಲ್ಲಿ (ಅಂಟಾರ್ಕ್ಟಿಕಾ ಮತ್ತು ಗ್ರೀನ್‌ಲ್ಯಾಂಡ್‌ಗಳನ್ನು ಹೊರತುಪಡಿಸಿ) ಸುಮಾರು ಎರಡು ಲಕ್ಷ ಹಿಮನದಿಗಳಿವೆ. ವಾಸ್ತವ ಏನೆಂದರೆ ಹಿಮನದಿಗಳಿಂದಲೇ ಅಮೆಜಾನ್, ಗಂಗಾ, ಸಿಂಧು, ಬ್ರಹ್ಮಪುತ್ರ, ಮೇಕಾಂಗ್, ಯಾಂಗ್ಸೇ... ಇವುಗಳೂ ಸೇರಿದಂತೆ ಬುವಿಯ ಬಹುಪಾಲು ಎಲ್ಲ ನದಿಗಳೂ ಅವತರಿಸಿವೆ. ಹಿಮನದಿಗಳಿಗೆ ವಾಯುಮಂಡಲದಿಂದ ಬೀಳುವ ಹಿಮವಷ್ಟೇ ಕರಗಿದರೆ ಇಂತಹ ನದಿಗಳು ಶಾಶ್ವತವಾಗಿ ಉಳಿಯುತ್ತವೆ; ಇಲ್ಲವಾದರೆ ತೆಳ್ಳನೆಯ ಜಲಧಾರೆಗಳಾಗಿ ಕ್ಷೀಣಿಸುತ್ತವೆ!

ಆದರೆ, ಇಂತಹ ಅದ್ಭುತ ಸಮತೋಲನ ಇತ್ತೀಚೆಗೆ ಉಳಿದಿಲ್ಲ. ಪ್ರಮುಖವಾಗಿ ಮಾನವ ಮೂಲ ಚಟುವಟಿಕೆಗಳಿಂದ ಉದ್ಭವವಾಗಿರುವ ಜಾಗತಿಕ ತಾಪಮಾನ ಏರಿಕೆಯಿಂದ ಹಿಮನದಿಗಳು ಕ್ಷಿಪ್ರವಾಗಿ ಕರಗುತ್ತಿವೆ; ತಂತಮ್ಮ ಮೂಲ ಹಿಮದ ದಾಸ್ತಾನನ್ನೂ ಕಳೆದುಕೊಳ್ಳುತ್ತಿವೆ. ಈ ಸಮಸ್ಯೆಯ ತೀವ್ರತೆಯ ಕೂಲಂಕಶ ಅಧ್ಯಯನವೊಂದನ್ನು ನೂರಾರು ವಿಜ್ಞಾನಿಗಳ ಮತ್ತು ಸಂಶೋಧಕರ ಸಹಯೋಗದ ಅಂತರರಾಷ್ಟ್ರೀಯ ತಂಡವೊಂದು ಇತ್ತೀಚೆಗೆ ಪೂರೈಸಿದೆ; ಅದರ ವರದಿ ಪ್ರತಿಷ್ಠಿತ ವಿಜ್ಞಾನ ಜರ್ನಲ್ 'ನೇಚರ್'ನಲ್ಲಿ ಪ್ರಕಟವಾಗಿದೆ.




ಆ ಅಧ್ಯಯನದ ಪ್ರಕಾರ 2000ನೇ ಇಸವಿಯಿಂದ ಈಚೆಗೆ ಪರ್ವತ ಹಿಮನದಿಗಳು ಒಟ್ಟಾರೆ ಪ್ರತಿವರ್ಷ ಸರಾಸರಿ 273 ಶತಕೋಟಿ ಟನ್‌ಗಳಷ್ಟು ಹಿಮವನ್ನು ಕಳೆದುಕೊಂಡಿವೆ. (ಇದು ಇಡೀ ಜಗದ ಎಂಟು ಶತಕೋಟಿ ಜನರಿಗೆ 30 ವರ್ಷಗಳಿಗೆ ಕುಡಿವ ನೀರು ಆಗಿ ಸಾಕಾಗುತ್ತದೆ) ಅಷ್ಟೇ ಅಲ್ಲದೆ ಹಿಮನದಿಗಳು ಕುಗ್ಗುತ್ತಿರುವ ವೇಗವೂ ಹೆಚ್ಚುತ್ತಿದೆ. 2000ದಿಂದ 2011ರ ಅವಧಿಯಲ್ಲಿ ಸಂಭವಿಸಿದ ನೀರ್ಗಲ್ಲ ನಷ್ಟ ಪ್ರತಿವರ್ಷಕ್ಕೆ 231 ಶತಕೋಟಿ ಟನ್; 2012ರಿಂದ 2022ರ ಅವಧಿಯಲ್ಲಿ ಪ್ರತಿವರ್ಷದ ನಷ್ಟ 314 ಶತಕೋಟಿ ಟನ್; 2023ರಲ್ಲಿ ಹೆಚ್ಚುವರಿ ಕರಗಿ ನಷ್ಟವಾದ ಹಿಮರಾಶಿ 548 ಶತಕೋಟಿ ಟನ್!

ಸ್ಪಷ್ಟವಾಗಿಯೇ, ಇದೇ ವಿದ್ಯಮಾನ ಹೀಗೆಯೇ ಮುಂದುವರೆದರೆ ದೀರ್ಘಕಾಲದಲ್ಲಿ ಧರೆಯ ಸಕಲ ಪ್ರಧಾನ ಜೀವನದಿಗಳೂ ಕ್ಷೀಣ ಜಲಧಾರೆಗಳಾಗುತ್ತವೆ. ಹಿಮನದಿಗಳು ಕರಗಿ ಪ್ರವಹಿಸಿದ ಹೆಚ್ಚುವರಿ ನೀರೆಲ್ಲ ಕಡಲನ್ನು ಸೇರಿ ಸಾಗರ ಮಟ್ಟವೂ ಏರುತ್ತದೆ. ಕುಡಿವ ನೀರಿನ ತತ್ವಾರದ ಜೊತೆಗೆ ಕಡಲಂಚಿನ ಮಾನವ ನಿರ್ಮಾಣಗಳೆಲ್ಲವೂ ಮುಳುಗಿ ಜಲಸಮಾಧಿಯಾಗುತ್ತವೆ. ಹಿಮನದಿಗಳ ಹಿಂಜರಿತದಿಂದ ಉದ್ಭವಿಸಿರುವ ತೀವ್ರ ಆತಂಕ ಇದೇ!

■ ಎನ್. ವಾಸುದೇವ್